**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:- 105/2025**

| | | |
|---|---|---|
| **ಸಾಕ್ಷಿದಾರನ ಹೆಸರು** | : ಇಬ್ರಾಹಿಂ | **ಪಿ.ಡಬ್ಲ್ಯೂ:-5** |
| **ತಂದೆಯ ಹೆಸರು** | : ನೂರ್ ಅಹಮದ್ | **ಸಿ.ಡಬ್ಲ್ಯೂ:- 6** |
| **ವಯಸ್ಸು** | : 32 ವರ್ಷ | |
| **ಉದ್ಯೋಗ** | : ಟೈಲ್ಸ್ ಕೆಲಸ | |
| **ವಾಸಸ್ಥಳ** | : ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:25.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ಈಗ ನಾನು ನೋಡುತ್ತಿರುವ ಶವ ಪಂಚನಾಮೆಯಲ್ಲಿರುವ ಸಹಿ ನನ್ನದೆ. ಸದರಿ ಶವ ಪಂಚನಾಮೆಯನ್ನು ನಿಶಾನೆ ಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-14(ಎ) ಎಂದು ಗುರುತಿಸಿದೆ. ಈಗ್ಗೆ ಒಂದು ವರ್ಷದ ಹಿಂದೆ ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ಶವ ಪಂಚನಾಮೆ ಕಾಲಕ್ಕೆ ಆ ಸಹಿ ಮಾಡಿದ್ದೆ. ಆ ಕಾಲಕ್ಕೆ ಮುದಾಸಿರ್ ಎನ್ನುವವರು ಮರಣ ಹೊಂದಿದ್ದರು. ಮುದಾಸಿರ್ ನನ್ನೊಟ್ಟಿಗೆ ಕೆಲಸ ಮಾಡುತ್ತಿದುದ್ದರಿಂದ ಅವರ ಶವವನ್ನು ಪಡೆಯಲು ಹೋದಾಗ ಆ ಸಹಿಯನ್ನು ಪಡೆದಿದ್ದರು.

**2.** ಆಸ್ಪತ್ರೆಯಲ್ಲಿ ಮುದಾಸಿರ್ ರವರ ಶವವನ್ನು ನೋಡಿದ್ದೆ. ನಾನು ಶವವನ್ನು ದೂರದಿಂದ ನೋಡಿದ್ದರಿಂದ ಮುದಾಸಿರ್ ರವರ ದೇಹದ ಮೇಲೆ ಎಲ್ಲೆಲ್ಲಿ ಗಾಯ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಿಶಾನೆ ಪಿ-14 ಕ್ಕೆ ಸಹಿ ಹಾಕಿದಾಗ ಇಮ್ರಾನ್ ಪಾಷ, ಇನ್ನೊಬ್ಬ

ಇಮ್ರಾನ್ ಮತ್ತು ವಸೀಮ್ ಹಾಜರಿದ್ದರು. ಆ ಕಾಲಕ್ಕೆ ಶವದ ಬಳಿ ನಿಲ್ಲಿಸಿ ನಮ್ಮ ಪೋಟೋಗಳನ್ನು ತೆಗೆದಿದ್ದರು. ಈಗ ನಾನು ನೋಡುತ್ತಿರುವ ಪೋಟೋದಲ್ಲಿ ನಾನು ಸಹ ಇದ್ದೇನೆ. ಸದರಿ ಪೋಟೊವನ್ನು ನಿಶಾನೆ ಪಿ–15 ಎಂದು ಗುರುತಿಸಿದೆ. ಇನ್ನು 4 ಪೋಟೋಗಳಲ್ಲಿ ಮುದಾಸಿರ್ ನ ಶವ ಇದೆ. ಸದರಿ ಪೋಟೋಗಳನ್ನು ನಿಶಾನೆ ಪಿ–16 ರಿಂದ 19 ಎಂದು ಗುರುತಿಸಿದೆ.

**3.** ಆ ಮಹಜರ್ ಕಾಲಕ್ಕೆ ಮುದಾಸಿರ್ ನ ಸಂಬಂಧಿಯವರು ಹಾಜರಿದ್ದರು. ಆದರೆ ಅವರ ಹೆಸರು ಗೊತ್ತಿಲ್ಲ. ಸಹಿ ಮಾಡಿದ ಬಳಿಕ ಆತನ ಸಂಬಂಧಿಕರು ಶವವನ್ನು ತೆಗೆದುಕೊಂಡು ಹೋಗಿದ್ದರು. ನಾನು ನನ್ನ ಗಾಡಿಯಲ್ಲಿ ಮನೆಗೆ ಹೋಗಿದ್ದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**4.** ದಿಃ– 07.12.2024 ರಂದು ನಿಶಾನೆ ಪಿ–14 ಕ್ಕೆ ಸಹಿ ಹಾಕಿದ್ದೆ ಎಂದರೆ ನಿಜ. ಮುದಾಸಿರ್ ನ ಶವ ಪರೀಕ್ಷೆಗಿಂತ ಮುಂಚೆ ಶವ ಮಹಜರ್ ಮಾಡಲು ಪಂಚರಾಗಿ ಹಾಜರಿರುವಂತೆ ನನಗೆ, ಮೊಹಮ್ಮದ್ ಇಮ್ರಾನ್ ಮತ್ತು ಮೊಹಮ್ಮದ್ ಪಾಷ ರವರಿಗೆ ನೋಟೀಸ್ ಕೊಟ್ಟು ನಾವು ಒಪ್ಪಿದ ಬಳಿಕ ನಮಗೆ ಮುದಾಸಿರ್ ಪಾಷದ ಶವದ ಮೇಲೆ ಎಲ್ಲೆಲ್ಲಿ ಗಾಯಗಳಾಗಿದೆ ಎಂದು ತೋರಿಸಿ ನಿಶಾನೆ ಪಿ–14 ರಂತೆ ಮಹಜರ್ ಬರೆದು ಮೃತನ ಸಂಬಂಧಿಕರ ಹೇಳಿಕೆ ಪಡೆದು ನಮಗೆ ಓದಿ ಹೇಳಿ ನಮ್ಮ ಸಹಿ ಪಡೆದಿದ್ದರು ಎಂದರೆ

ಸರಿಯಲ್ಲ. ಮಹಜರಿನ ಎಲ್ಲಾ ವಿಷಯ ತಿಳಿದುಕೊಂಡು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ.

**5.** ನಾನು ಮುದಾಸಿರ್ ನ ಶವವನ್ನು ತುಂಬಾ ಹತ್ತಿರದಿಂದ ನೋಡಿದ್ದೇನೆ ಮತ್ತು ಎಲ್ಲೆಲ್ಲಿ ಗಾಯಗಳಾಗಿದೆ ಎಂದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಕೋರ್ಟ್ ಮುಂದಿರುವ ಆರೋಪಿ ನನಗೆ ಪರಿಚಯವಿಲ್ಲ. ಆರೋಪಿ ನನ್ನ ಸಂಬಂಧಿಕ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ಇರುವುದಿಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**